ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಲೋಕಸಭಾ ಸ್ಪೀಕರ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE 06/03/2020

# ಕಾಂಗ್ರೆಸ್‌ನ 7 ಸಂಸದರ ಅಮಾನತು

## ಕಲಾಪಕ್ಕೆ ಅಡ್ಡಿಪಡಿಸಿದ ಆರೋಪ | ಲೋಕಸಭಾ ಸ್ಪೀಕರ್ ಕಠಿಣ ಕ್ರಮ

**ಹೊಸದಿಲ್ಲಿ:** ಸದನದ ಬಾವಿಗೆ ತೆರಳಿ ಧರಣಿ ನಡೆಸುವುದರ ಜತೆಗೆ ಕೇಂದ್ರ ಸರಕಾರದ ವಿರುದ್ಧ ಎತ್ತರದ ಧ್ವನಿಯಲ್ಲಿ ಘೋಷಣೆ ಕೂಗಿ ಸದನದಲ್ಲಿ ಅನುಚಿತ ವರ್ತನೆ ತೋರಿಸಿ ಕಲಾಪ ನಡೆಸಲು ಅಡ್ಡಿಪಡಿಸಿದ ಕಾಂಗ್ರೆಸ್‌ನ ಏಳು ಲೋಕಸಭಾ ಸದಸ್ಯರನ್ನು ಬಜೆಟ್ ಅಧಿವೇಶನ ಮುಗಿಯುವವರೆಗೆ ಅಮಾನತುಗೊಳಿಸಲಾಗಿದೆ.

ಗುರುವಾರ ನಾಲ್ಕನೇ ಸಲ ಮುಂದೂಡಲಾದ ಸದನ ಮಧ್ಯಾಹ್ನ 3 ಗಂಟೆಗೆ ಸೇರಿದಾಗ ಸ್ಪೀಕರ್ ಪೀಠದಲ್ಲಿದ್ದ ಮೀನಾಕ್ಷಿ ಲೇಖಿ ಅವರು ಕಾಂಗ್ರೆಸ್‌ನ ಏಳು ಸದಸ್ಯರನ್ನು ದಿನದ ಮಟ್ಟಿಗೆ ಸದನದಿಂದ ಅಮಾನತುಗೊಳಿಸಿರುವುದಾಗಿ ಘೋಷಿಸಿದರು. ನಂತರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ ಅವರು ಬಜೆಟ್ ಅಧಿವೇಶನ ಮುಗಿಯುವವರೆಗೂ ಈ ಸದಸ್ಯರನ್ನು ಅಮಾನತುಗೊಳಿಸಬೇಕು ಎಂಬ ನಿರ್ಣಯ ಮಂಡಿಸಿದರು. ಕಾಂಗ್ರೆಸ್ ಸದಸ್ಯರ ಪ್ರತಿಭಟನೆ ನಡುವೆಯೇ ಸದನ ಅದಕ್ಕೆ ಧ್ವನಿಮತದ ಮೂಲಕ ಅಂಗೀಕಾರ ನೀಡಿತು. ತಕ್ಷಣ ಸದನದಿಂದ ನಿರ್ಗಮಿಸುವಂತೆ ಅಮಾನತುಗೊಂಡ ಸಂಸದರಿಗೆ ಸೂಚಿಸಿದ ಲೇಖಿ, ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಿದರು. ಗೌರವ್ ಗೊಗೊಯ್, ಟಿ.ಎನ್.ಪ್ರತಾಪನ್, ಡೀನ್ ಕುರಿಯಾಕೋಸ್, ಮಾಣಿಕ್ಕಮ್ ಟ್ಯಾಗೋರ್, ರಾಜ್‌ಮೋಹನ್ ಉನ್ನಿಥಾನ್, ಬೆನ್ನಿ ಬೆಹನಾನ್ ಮತ್ತು ಗುರ್ಜೀತ್ ಸಿಂಗ್ ಔಜ್ಲಾ ಅಮಾನತುಗೊಂಡವರು.

"ಇದು ಸರಕಾರದ ತೀರ್ಮಾನವೇ ಹೊರತು ಸ್ಪೀಕರ್ ನಿರ್ಧಾರವಲ್ಲ, ಸಂಸದರ ಅಮಾನತು ಸರಕಾರದ ಸರ್ವಾಧಿಕಾರಿ ನಡೆ," ಎಂದು ಕಾಂಗ್ರೆಸ್ ಟೀಕಿಸಿದೆ. "ಸದಸ್ಯರ ಅನುಚಿತ ವರ್ತನೆಯನ್ನು ಸಹಿಸಿಕೊಳ್ಳಬೇಕೇನು," ಎಂದು ಪ್ರಶ್ನಿಸುವ ಮೂಲಕ ಸರಕಾರ ಸ್ಪೀಕರ್ ನಡೆಯನ್ನು ಸಮರ್ಥಿಸಿಕೊಂಡಿದೆ.

ಸಂಸತ್‌ನ ಬಜೆಟ್ ಅಧಿವೇಶನದ ಮುಂದುವರಿದ ಭಾಗ ಕಳೆದ ಸೋಮವಾರ ಆರಂಭವಾಗಿದ್ದು, ಪ್ರತಿಪಕ್ಷಗಳ ಗದ್ದಲದಿಂದ ಸತತ ನಾಲ್ಕನೇ ದಿನವೂ ಉಭಯ ಸದನಗಳ ಕಲಾಪ ಬಲಿಯಾಗಿದೆ.

**ಬೇನಿವಾಲ್ ಹೇಳಿಕೆ:** ಕೊರೊನಾ ವೈರಸ್ ಕುರಿತು ಚರ್ಚೆ ನಡೆಯುತ್ತಿದ್ದ ವೇಳೆ ಎನ್‌ಡಿಎ ಮೈತ್ರಿಕೂಟದಲ್ಲಿರುವ ರಾಜಸ್ಥಾನದ ರಾಷ್ಟ್ರೀಯ ಲೋಕತಾಂತ್ರಿಕ ಪಾರ್ಟಿ ಸಂಸದ ಹನುಮಾನ್ ಬೇನಿವಾಲ್ ಅವರು, "ಭಾರತದಲ್ಲಿ ಇಟಲಿ ಪ್ರವಾಸಿಗರಿಂದ ಕೊರೊನಾ ಸೋಂಕು ಹರಡುತ್ತಿದೆ. ಹೀಗಾಗಿ ಸೋನಿಯಾ ಗಾಂಧಿ ನಿವಾಸದಲ್ಲಿ ತಪಾಸಣೆ ನಡೆಸಬೇಕು. ರಾಹುಲ್ ಗಾಂಧಿ ಅವರನ್ನೂ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು," ಎಂದು ಹೇಳಿದ್ದು ದಿನದ ಕಲಾಪವನ್ನೇ ಬಲಿ ಪಡೆಯಿತು.

### ಲೋಕಸಭೆ ಕಲಾಪ ಮುಂದೂಡಿಕೆ

ಕಲಾಪ ನಡೆಯಲು ಅವಕಾಶ ನೀಡದ ಪ್ರತಿಪಕ್ಷಗಳ ವರ್ತನೆಯಿಂದ ಬೇಸತ್ತಿರುವ ಸ್ಪೀಕರ್ ಓಂ ಬಿರ್ಲಾ ಸತತ 2ನೇ ದಿನವೂ ಪೀಠದಲ್ಲಿ ಕೂರಲಿಲ್ಲ. ಅವರ ಬದಲಿಗೆ ಹಿರಿಯ ಸದಸ್ಯರಾದ ಬಿ. ಮಹತಾಬ್, ರಮಾದೇವಿ, ರಾಜೇಂದ್ರ ಅಗರ್ವಾಲ್, ಮತ್ತು ಮೀನಾಕ್ಷಿ ಲೇಖಿ ಕಲಾಪ ನಡೆಸಿಕೊಟ್ಟರು.

[illegible]

ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ ಅವರು ಮಂಡಿಸಿದ ಗಣಿ ಕಾಯಿದೆ ತಿದ್ದುಪಡಿ ವಿಧೇಯಕಕ್ಕೆ ಲೋಕಸಭೆಯಲ್ಲಿ ಗುರುವಾರ ಅಂಗೀಕಾರ ಸಿಗಲಿಲ್ಲ. "ನಮ್ಮ ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಕಲ್ಲಿದ್ದಲು ನಿಕ್ಷೇಪವಿದ್ದರೂ ಆಮದು ಮಾಡಿಕೊಳ್ಳಬೇಕಾಗಿದೆ. ಈ ವಿಧೇಯಕವು ಗಣಿಗಾರಿಕೆಯ ಅಂತಿಮ ಬಳಕೆದಾರನ ಮೇಲೆ ಇರುವ ನಿರ್ಬಂಧಗಳನ್ನು ತೆರವುಗೊಳಿಸುತ್ತಿದೆ. ಆದರಿಂದ ಗಣಿಗಾರಿಕೆ ಕ್ಷೇತ್ರದಲ್ಲಿ ಭಾರಿ ಬದಲಾವಣೆಯಾಗಲಿದೆ. ಸದನ ಕ್ರಮಬದ್ಧವಾಗಿಲ್ಲದ ಕಾರಣ ಯಾವುದೇ ಚರ್ಚೆ ಇಲ್ಲದೆ ವಿಧೇಯಕ ಅಂಗೀಕರಿಸಬೇಕು," ಎಂದು ಮನವಿ ಮಾಡಿದರು. ಗದ್ದಲದಿಂದಾಗಿ ವಿಧೇಯಕವನ್ನು ಮತಕ್ಕೆ ಹಾಕುವ ಅವಕಾಶವೇ ಒದಗಲಿಲ್ಲ.

### ಇದು ಸಂಸತ್ತು ಮಾರುಕಟ್ಟೆಯಲ್ಲ

ರಾಜ್ಯಸಭೆಯಲ್ಲಿ ಬೆಳಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರು ಕೊರೊನಾ ಸೋಂಕಿನ ಕುರಿತು ಹೇಳಿಕೆ ನೀಡಿದರು. ಬಳಿಕ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಪ್ರಶ್ನೋತ್ತರ ಕಲಾಪ ಆರಂಭಿಸಲು ಮುಂದಾಗುತ್ತಿದ್ದಂತೆಯೇ ಪ್ರತಿಪಕ್ಷಗಳ ಸದಸ್ಯರು ದಿಲ್ಲಿ ಗಲಭೆ ವಿಷಯ ಪ್ರಸ್ತಾಪಿಸಿ ಸದನದ ಬಾವಿಗೆ ತೆರಳಿ ಧರಣಿ ಆರಂಭಿಸಿದರು. "ಇದು ಸಂಸತ್ತು, ಮಾರುಕಟ್ಟೆಯಲ್ಲ," ಎಂದು ಸಭಾಪತಿ ಹೇಳಿದ್ದು ಸದಸ್ಯರ ಕಿವಿಗೇ ಬೀಳಲಿಲ್ಲ. ಹೀಗಾಗಿ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

